ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

**Email Id: adpiqsection@gmail.com**

**ಸಂಖ್ಯೆ: ಕ್ಯೂ3/ಡಿ.ಪಿ.ಎಸ್.ಇ/ಮು.ಪ/ಮೇ-2024/06/2023-24** **ದಿನಾಂಕ: 15/04/2024**

## ಅಧಿಸೂಚನೆ

ವಿಷಯ:- ಮೇ-2024ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಮತ್ತು ದ್ವಿತೀಯ ಡಿಪಿಎಸ್ಇ ಪರೀಕ್ಷೆಗೆ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ06/ಎಂಪಿಇ2017;ಬೆಂಗಳೂರು; ದಿನಾಂಕ:05/07/2019.

2. ಡಿಎಸ್ಇಆರ್‌ಟಿ ಪತ್ರ ಸಂಖ್ಯೆ: ಶಿತ6.ಸ.ಶಿ.ತಸಂ.ಪ್ರ.ದಾಖಲಾತಿ07;2019-20; ದಿನಾಂಕ:12.10.2019.

3. ದಿನಾಂಕ:21/04/2023ರಂದು ಡಿ.ಎಸ್.ಇ.ಆರ್.ಟಿ.ಯಲ್ಲಿ ನಡೆದ ಸಭೆಯ ನಡಾವಳಿ.

************

2023-24ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಡಿಪಿಎಸ್ಇ ವಾರ್ಷಿಕ ಕಾರ್ಯ ಯೋಜನೆಯಂತೆ ಶೈಕ್ಷಣಿಕ ಅವಧಿಯ ಪ್ರಥಮ ಮತ್ತು ದ್ವಿತೀಯ ಡಿಪಿಎಸ್ಇ ಹೊಸ ಮತ್ತು ಪುನರಾವರ್ತಿತ ಅಭ್ಯರ್ಥಿಗಳಿಗೆ ಲಿಖಿತ (ಥಿಯರಿ) ಪರೀಕ್ಷೆಯನ್ನು ಮೇ-2024ರ ಮಾಹೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಲ್ಲಿ 2019-20ನೇ ಸಾಲಿನಿಂದ ಡಿಪಿಎಸ್ಇ ಪರೀಕ್ಷಾ ಪ್ರಕ್ರಿಯೆಗಳನ್ನು Online ವ್ಯವಸ್ಥೆಗೆ ತರಲಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಡಿಪಿಎಸ್ಇ ಪರೀಕ್ಷೆಗೆ Online ಮೂಲಕ ಹೊಸ ಹಾಗೂ ಅನುತ್ತೀರ್ಣ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

1. ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳು ನಿಯಮಾನುಸಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಅರ್ಜಿ ನಮೂನೆಯಲ್ಲಿ ಮಂಡಲಿಯ **https://kseab.karnataka.gov.in** ಜಾಲತಾಣದಲ್ಲಿ Other Exams Potral --> DPSE Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

2. **ದಾಖಲಾತಿ ಅನುಮೋದನಾ ಪಟ್ಟಿ:-**

ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯರವರ ನಿರ್ದೇಶನ ಮತ್ತು ಮಾರ್ಗದರ್ಶನಗಳಂತೆ, ಜಿಲ್ಲಾ ಡಯಟ್ ಪ್ರಾಂಶುಪಾಲರು ಡಿಪಿಎಸ್ಇ ಅಭ್ಯರ್ಥಿಗಳ ನಾಮಯಾದಿಪಟ್ಟಿ (Nominal Roll) ಪರಿಶೀಲಿಸಿ ಅನುಮೋದಿಸುವುದು.

3. **ಪರೀಕ್ಷಾ ಶುಲ್ಕದ ವಿವರ:- ಹೊಸ ಅಭ್ಯರ್ಥಿಗಳಿಗೆ**

| ಕ್ರಮ ಸಂಖ್ಯೆ | ಪರೀಕ್ಷೆ | ಒಟ್ಟು ಶುಲ್ಕ |
|---|---|---|
| 01 | ಪ್ರಥಮ ಡಿಪಿಎಸ್ಇ | 1130-00 |
| 02 | ದ್ವಿತೀಯ ಡಿಪಿಎಸ್ಇ | 1170-00 |

ಪುನರಾವರ್ತಿತ ಅಭ್ಯರ್ಥಿಗಳಿಗೆ

| ಕ್ರಮ ಸಂಖ್ಯೆ | ಪರೀಕ್ಷೆ | ಒಟ್ಟು ಶುಲ್ಕ |
|---|---|---|
| 01 | ಒಂದು ವಿಷಯಕ್ಕೆ | 330-00 |
| 02 | ಎರಡು ವಿಷಯಗಳಿಗೆ | 660-00 |
| 03 | ಮೂರು ವಿಷಯಗಳಿಗೆ | 1190-00 |

**(ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ1 ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇದೆ)**

## 4. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಮಂಡಲಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಪಾವತಿಸಲು ವ್ಯವಸ್ಥೆ ಮಾಡಲಾಗಿದೆ.
- ಆನ್‌ಲೈನ್ ಹೊರತುಪಡಿಸಿ ಮತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅಭ್ಯರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್/ನೆಟ್ ಬ್ಯಾಂಕಿಂಗ್ ಬಳಸಿ ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಡಯಟ್ ಪ್ರಾಂಶುಪಾಲರ ಮೂಲಕ ಮಂಡಳಿಗೆ ಸಲ್ಲಿಸಬೇಕು.
- **ಮಂಡಲಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.**

## 5. ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ.

| ಕ್ರ.ಸಂ | ವಿವರ | ದಿನಾಂಕ: |
|---|---|---|
| **01** | **ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಅಧಿಸೂಚನೆ ಪ್ರಕಟಣೆ ದಿನಾಂಕ** | **20-04-2024** |
| **02** | **ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ** | **22-04-2024** |
| **03** | **ಪರೀಕ್ಷಾ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | **29-04-2024** |
| **04** | **ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ದಿನಾಂಕ** | **30-04-2024** ರಿಂದ **06-05-2024** |
| **05** | **ಮೇ-2024 ರ ಡಿಪಿಎಸ್‌ಇ ಪರೀಕ್ಷೆಗೆ ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ಪ್ರಾರಂಭದ ದಿನಾಂಕ** | **09-05-2024** |
| **06** | **ಮೇ-2024 ರ ಡಿಪಿಎಸ್‌ಇ ಪರೀಕ್ಷೆಗೆ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ** | **13-05-2024** |
| **07** | **ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ** | **16-05-2024** |

## 6. ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

**(ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಅನುಕೂಲವಾಗುವಂತೆ FlowChart ನೀಡಲಾಗಿದ್ದು ಅದನ್ನು ಕಡ್ಡಾಯವಾಗಿ ಓದಿಕೊಳ್ಳುವುದು.)**

1. ಮೇ–2024 ಪ್ರಥಮ/ದ್ವಿತೀಯ ಡಿಪಿಎಸ್‌ಇ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೊಂದಣಿ ಮಾಹಿತಿಯನ್ನು ಮಂಡಲಿಯ ಜಾಲತಾಣದಲ್ಲಿ Other Exams Potral → DPSE Examination ಮೂಲಕ ಸಂಸ್ಥೆಯ Login ನಲ್ಲಿ Upload ಮಾಡಲು ಸೂಚಿಸಿದೆ.
2. ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಪೋನ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು.
3. **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಹಾಗೂ /ಪ್ರವರ್ಗ1 ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ರೂ. 1.00 ಲಕ್ಷದವರೆಗಿನ ಆದಾಯಮಿತಿ ಹೊಂದಿರಬೇಕು. ಅದಕ್ಕೆ ಸಂಬಂಧಿಸಿದ ಜಾತಿ ಮತ್ತು ಆದಾಯ ಪ್ರಮಾಣಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.**
4. ಸಂಸ್ಥೆಯ ಹಂತದಲ್ಲಿ Submit ಮಾಡಿದ ನಂತರ ದೋಷಗಳು ಗಮನಕ್ಕೆ ಬಂದಲ್ಲಿ ಸಂಸ್ಥೆಯ ಲಾಗಿನ್‌ನಲ್ಲಿ Up date Application Option ಬಳಸಿ ತಿದ್ದುಪಡಿ ಮಾಡಬಹುದಾಗಿದೆ. .
5. ನಿಗದಿಪಡಿಸಿದ ದಿನಾಂಕದ ನಂತರ ತಿದ್ದುಪಡಿಗೆ ಅಥವಾ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ತಿದ್ದುಪಡಿಗೆ **ರೂ.200.00** ದಂಡ ವಿಧಿಸಲಾಗುವುದು.
6. ಮಂಡಲಿಯ ಗಮನಕ್ಕೆ ತರದೇ ಅಭ್ಯರ್ಥಿಗಳ ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶ ಇರುವುದಿಲ್ಲ.
7. **ಪರೀಕ್ಷಾ ಅರ್ಜಿಗಳನ್ನು ಮಂಡಲಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳ ನೇರಭಂಗಿಯ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.**
8. **ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್ ಲೋಡ್ ಮಾಡಬೇಕೇ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**
9. ಆನ್‌ಲೈನ್‌ನಲ್ಲಿ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ಅಭ್ಯರ್ಥಿಯ ಬದಲು ಬೇರೆ ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.
10. ಪ್ರಥಮ ಡಿಪಿಎಸ್‌ಇ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮಾರ್ಚ್ 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಡಿದ್ದಲ್ಲಿ ಅಥವಾ ಮುಕ್ತ ಶಾಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಥವಾ ಕೇಂದ್ರ ಪಠ್ಯಕ್ರಮದ ಪರೀಕ್ಷಾ ಮಂಡಲಿ ಅಥವಾ ಬೇರೆ ರಾಜ್ಯಗಳ ಪರೀಕ್ಷಾ ಮಂಡಲಿ ನಡೆಸಿದ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಮುಖ್ಯಸ್ಥರು ಅಂಕಪಟ್ಟಿಗಳನ್ನು ಪರಿಶೀಲಿಸಿ ಸೂಕ್ತ ಕಾಲಂನಲ್ಲಿ ವಿವರಗಳನ್ನು ಭರ್ತಿ ಮಾಡಿ Upload ಮಾಡಬೇಕು, ಈ ಅಭ್ಯರ್ಥಿಗಳ ವಿವರಗಳು **AUTO FETCH** ಆಗುವುದಿಲ್ಲವಾದ್ದರಿಂದ Online ಅರ್ಜಿಯಲ್ಲಿನ ಎಲ್ಲಾ ಅಂಕಣಗಳನ್ನು ಭರ್ತಿಮಾಡಬೇಕು.
11. ಪ್ರಥಮ ಡಿಪಿಎಸ್‌ಇ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು 2003 ಹಾಗೂ 2003ರ ನಂತರದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ ಮಾಹಿತಿಗಳು **AUTO FETCH** ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.
12. ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆ ಮೂಲಕ **AUTOFETCH** ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

13. ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಡಯಟ್‌ಗೆ ಸಲ್ಲಿಸುವುದು.

ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಡಿಪಿಎಸ್‌ಇ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

## 7. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ:-

ಪ್ರಥಮ ಡಿಪಿಎಸ್‌ಇ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಮಂಡಲಿಯಿಂದ ಅನುಮತಿ ಪಡೆದಿರಬೇಕು. ಅನುಮತಿ ಪಡೆದಿರುವ ಆದೇಶದ ಪ್ರತಿಯೊಂದಿಗೆ ಡಯಟ್ ಮುಖಾಂತರ ಮಂಡಲಿಗೆ ಸಲ್ಲಿಸಬೇಕು. ತದನಂತರ ಸಂಬಂಧಿಸಿದ ಸಂಸ್ಥೆಯ Login ಗೆ ಆ ಅಭ್ಯರ್ಥಿಯ ಅರ್ಜಿ ನಮೂನೆಯನ್ನು Upload ಮಾಡಲಾಗುವುದು.

## 8. ವಿಭಿನ್ನ ಸಾಮರ್ಥ್ಯವುಳ್ಳ ಅಭ್ಯರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿಕಲಚೇತನ ಅಭ್ಯರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ98/ಇಎಸ್‌ಡಬ್ಲ್ಯೂ2009 ದಿನಾಂಕ:10.06.2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

## 9. ಪ್ರಥಮ ಮತ್ತು ದ್ವಿತೀಯ ಡಿಪಿಎಸ್‌ಇ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ

### ಪ್ರಥಮ ಡಿಪಿಎಸ್‌ಇ

| ವಿಷಯ | ವಿಷಯ ಸಂಕೇತ ಮತ್ತು ಪತ್ರವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| Foundations of ECE | 1001 X | 100 | 3 ಘಂಟೆ |
| Psychology of child development | 1002 X | 100 | 3 ಘಂಟೆ |
| Methods and Strategies of ECE | 1003 X | 100 | 3 ಘಂಟೆ |

### ದ್ವಿತೀಯ ಡಿಪಿಎಸ್‌ಇ

| ವಿಷಯ | ವಿಷಯ ಸಂಕೇತ ಮತ್ತು ಪತ್ರವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| Organisation and Management of Pre Schools | 2001 X | 100 | 3 ಘಂಟೆ |
| Management Of child health and nutrition | 2002 X | 100 | 3 ಘಂಟೆ |
| Inclusive and value education | 2003 X | 100 | 3 ಘಂಟೆ |

- ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿಪಿಎಸ್‌ಇ ಕಾಲೇಜುಗಳು ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಲಿಯಿಂದ ಕೇಳಿದಾಗ ಅದನ್ನು ಮಂಡಲಿಗೆ ಸಲ್ಲಿಸುವುದು.
- ಡಯಟ್ ಹಂತದಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳಿಂದ ಪರೀಕ್ಷಾ ಶುಲ್ಕದ ಚಲನ್ ಪರಿಶೀಲಿಸಿ ಮಂಡಲಿಗೆ ಕಳುಹಿಸುವುದು.
- ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಲಿಯ ಹಂತದಲ್ಲಿ ಪರಿಶಿಲಿಸಿ ಸಂಸ್ಥೆಯ Loginಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ಮಂಡಲಿ ಇಂದ ಸೂಚಿಸಲ್ಪಟ್ಟ ನಿಗದಿತ ದಿನದೊಳಗೆ ದೋಷಗಳಿದ್ದಲ್ಲಿ ಸರಿಪಡಿಸುವುದು.

**10. ಪ್ರಯತ್ನಗಳ ಮಿತಿ:-**

ದ್ವಿತೀಯ ಡಿ.ಪಿ.ಎಸ್.ಇ ವ್ಯಾಸಂಗ ಮಾಡಿದ ವರ್ಷದಿಂದ ಮೂರು ವರ್ಷ ಅಥವಾ ಸತತ ಆರು ಪ್ರಯತ್ನದೊಳಗೆ ಪ್ರಥಮ ಮತ್ತು ದ್ವಿತೀಯ ಡಿ.ಪಿ.ಎಸ್.ಇ ಪರೀಕ್ಷೆಗಳನ್ನು ತೇರ್ಗಡೆ ಹೊಂದಬೇಕು. ಅದರನ್ವಯ ಪರೀಕ್ಷೆ ತೆಗೆದುಕೊಂಡಿರುವ /ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಅಂತಿಮ ಕಾಲಾವಕಾಶವಾಗುತ್ತದೆ.

| ಕ್ರಮ ಸಂಖ್ಯೆ | ದ್ವಿತೀಯ ಡಿ.ಪಿ.ಎಸ್.ಇ ವ್ಯಾಸಂಗ ಮಾಡಿದ ಶೈಕ್ಷಣಿಕ ವರ್ಷದ ಮುಖ್ಯ ಪರೀಕ್ಷೆ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| 01 | ಮೇ/ಜೂನ್-2022 | ಡಿಸೆಂಬರ್-2024 |
| 02 | ಮೇ/ಜೂನ್-2023 | ಡಿಸೆಂಬರ್-2025 |

**11. ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಸಲ್ಲಿಸುವ ಬಗ್ಗೆ.**

ಆಂತರಿಕ ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಆಂತರಿಕ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹಿಂದಿನ ಸಾಲಿನಂತೆ ನಿಗಧಿತ ನಮೂನೆಯಲ್ಲಿ ಸಿದ್ದಪಡಿಸಿಟ್ಟುಕೊಂಡು ಸಮನ್ವಯ ಸಮಿತಿಯ ದೃಢೀಕರಣ ಪಡೆಯುವುದು. ಮಂಡಲಿಯಿಂದ ಸಂಸ್ಥೆಗಳ ಲಾಗಿನ್‌ನಲ್ಲಿ ನೋಂದಣಿ ಸಂಖ್ಯೆಯುಳ್ಳ ಆಂತರಿಕ ಹಾಗೂ ಪ್ರಾಯೋಗಿಕ ಪರೀಕ್ಷೆಯ ನಮೂನೆಗಳನ್ನು ಲಭ್ಯಮಾಡಿದಾಗ ಸಮನ್ವಯ ಸಮಿತಿಯು ಮೌಲ್ಯಮಾಪನ ಮಾಡಿ ನೀಡಿರುವ ಅಂಕಗಳನ್ನು Upload ಮಾಡಲಾದ ನಮೂನೆಗಳಲ್ಲಿ "Online Mark Porting" ಮೂಲಕ ಮಂಡಳಿಗೆ ಸಲ್ಲಿಸಬೇಕು.

ಸಂಸ್ಥೆಗಳ ಮುಖ್ಯಸ್ಥರು ಈ ಅಂಕಗಳನ್ನು ಭರ್ತಿ ಮಾಡಿ ಸಲ್ಲಿಸಿದ ನಂತರ ಸಂಬಂಧಿಸಿದ ಡಯಟ್‌ಗೆ ಸಮನ್ವಯ ಸಮಿತಿಯು ನೀಡಿದ ಮೂಲ ದಾಖಲೆಗಳನ್ನು ಸಲ್ಲಿಸಬೇಕು. ಡಯಟ್ ಪ್ರಾಂಶುಪಾಲರು ಸಮನ್ವಯ ಸಮಿತಿಯು ನೀಡಿರುವ ಅಂಕಗಳಿಗೂ ಹಾಗೂ ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡಿರುವ ಅಂಕಗಳಿಗೂ ತಾಳೆಯಾಗುತ್ತಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಇದನ್ನು ಅನುಮೋದಿಸಬೇಕು. ವ್ಯತ್ಯಾಸವಿದ್ದಲ್ಲಿ ಡಯಟ್ ಪ್ರಾಂಶುಪಾಲರು ಇದನ್ನು ಮಂಡಲಿಯ ಗಮನಕ್ಕೆ ತರುವುದು.

**ಒಂದು ವೇಳೆ ವ್ಯತ್ಯಾಸವಾದಲ್ಲಿ ಪ್ರತಿ ದೋಷಕ್ಕೆ ಸಂಸ್ಥೆಯ ಮುಖ್ಯಸ್ಥರಿಗೆ ತಲಾ ರೂ. 1000/-ದಂತೆ ದಂಡ ವಿಧಿಸಲಾಗುವುದು.** ದಂಡವನ್ನು ಇತರೆ ಪರೀಕ್ಷೆಗಳು ಬ್ಯಾಂಕ್ ಖಾತೆಗೆ ಪಾವತಿಸಿ ಡಯಟ್ ಪ್ರಾಂಶುಪಾಲರ ಮುಖಾಂತರ ಮನವಿ ಸಲ್ಲಿಸಿದಲ್ಲಿ ಸರಿಪಡಿಸುವ ಬಗ್ಗೆ ಕ್ರಮವಹಿಸಲಾಗುವುದು. (ಈ ಕುರಿತಂತೆ ಮಾರ್ಗಸೂಚನೆಗಳೊಂದಿಗೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ನೀಡಲಾಗುವುದು)

Sheila

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಡಯಟ್ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

<u>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ</u>

**1.ಶ್ರೀಮತಿ, ಟಿ.ಡಿ.ಶೈಲ ಸಹಾಯಕ ನಿರ್ದೇಶಕರು, ಡಿಇಡಿ ಶಾಖೆ, ಮೊಬೈಲ್ ಸಂಖ್ಯೆ:9480343741**

**2.ಶ್ರೀ, ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ ಮೊಬೈಲ್ ಸಂಖ್ಯೆ:7892195954**

ನಿರ್ದೇಶಕರು (ಪರೀಕ್ಷೆಗಳು)
ಕ.ಶಾ.ಪ.ಮೌ.ಮಂಡಲಿ, ಬೆಂಗಳೂರು

<u>ಪ್ರತಿಗಳು :-</u>

1. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಕಲಬುರಗಿ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಲಿಯ ಕಾರ್ಯದರ್ಶಿಗಳಿಗೆ ಮುಂದಿನ ಕ್ರಮಕ್ಕಾಗಿ.
3. ಚಿತ್ರದುರ್ಗ ಮತ್ತು ಕಲಬುರಗಿ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
4. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
5. ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
6. ಕಾರ್ಯದರ್ಶಿಗಳು ಆಪ್ತ ಶಾಖೆಗೆ.
7. ಕಛೇರಿ ಪ್ರತಿ.